MANGALORE MARKET REPORTS

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

MMR MEDIA Since 1975

Vol.48 ENGLISH DAILY Subscription Yearly - Rs. - SATURDAY 23-7-2022

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

## ಮಲೇಶಿಯನ್ ಪಾಮೆಣ್ಣೆ ದರ ಇಳಿಕೆ

ಇಂಡೋನೇಶಿಯಾ ಪಾಮೆಣ್ಣೆ ರಫ್ತಿಗಿರುವ ತನ್ನ ದೇಶದ ಉತ್ಪಾದಕರು ರಫ್ತು ಮಾಡುವ ಶೇಕಡಾವಾರು ಪಾಮೆಣ್ಣೆಯನ್ನು ದೇಶದೊಳಗೆ ಮಾರಾಟ ಮಾಡಬೇಕೆನ್ನುವ (ಆಂತರಿಕ ಮಾರುಕಟ್ಟೆಯಲ್ಲಿ) ಶರ್ತವನ್ನು ಹಿಂತೆಗೆಯಲು ಚಿಂತಿಸುತ್ತಿದೆಯೆನ್ನುವ ವರದಿಗಳಿಂದ ಹಾಗೂ ಸೋಯಾಬೀನ್ ಎಣ್ಣೆ ದರ ಇಳಿಕೆಯಿಂದ ಮಲೇಶಿಯನ್ ಪಾಮೆಣ್ಣೆ ದರ ಇಳಿಕೆಯಾಗಿದೆ. ಈ ವಾರದಲ್ಲಿ ಏರಿಕೆಯಲ್ಲಿದ್ದ ಪಾಮೆಣ್ಣೆ ದರ ವಾರಾಂತ್ಯದಲ್ಲಿ ಇಳಿಕೆಯಾಗಿದೆ. ಕಪ್ಪುಸಮುದ್ರ ಪ್ರದೇಶಗಳ ಬಂದರುಗಳಿಂದ ಮತ್ತೆ ಸೂರ್ಯಕಾಂತಿ ಎಣ್ಣೆ ರಫ್ತು ಆರಂಭವಾಗಲಿರುವ ಸಾಧ್ಯತೆಗಳು ಪಾಮೆಣ್ಣೆ ದರ ಹಿನ್ನಡೆಗೆ ಕಾರಣವಾಗಿದೆ.

## ಜೋಳ ಜಾಗತಿಕ ದರ ಹೆಚ್ಚಳ ಹೆಚ್ಚು ವ್ಯಾಪ್ತಿಯಲ್ಲಿ ಜೋಳ ಬೆಳೆಯಲು ಪೂರಕ

ಜಾಗತಿಕವಾಗಿ ಜೋಳ ದರ ಹೆಚ್ಚಳವಿರುವುದು ಹಾಗೂ ಬೇಡಿಕೆಯೂ ಹೆಚ್ಚಳವಿರುವುದು ಹೆಚ್ಚಿನ ಪ್ರದೇಶ ವ್ಯಾಪ್ತಿಯಲ್ಲಿ ಜೋಳ ಬೆಳೆದು ಉತ್ಪಾದನೆ ಹೆಚ್ಚಿಸಲು ಪೂರಕವಾಗಿದೆ.

## ಜೋಳ ದರ ಸ್ವಲ್ಪ ಹೆಚ್ಚಳ

ಬಿಹಾರದಲ್ಲಿ ಫೀಡ್ಸ್ ತಯಾರಕರಿಂದ ಬೇಡಿಕೆ ಹೆಚ್ಚಳದಿಂದ ಜೋಳ ದರ ಹೆಚ್ಚಳವಾಗಿದ್ದು, ದಾವಣಗೆರೆಯಲ್ಲಿ ದರ ಸ್ಥಿರವಿದೆ. ಬಿಹಾರದಲ್ಲಿ ಆವಕ ಇಳಿಕೆಯಾಗಿದ್ದು, ದಾವಣಗೆರೆಯಲ್ಲಿ ಸ್ಥಿರವಾಗಿದೆ. ಪ್ರಮುಖ ಮಾರುಕಟ್ಟೆಗಳಲ್ಲಿ ಗೋಧಿ ದರ ಸ್ಥಿರವಾಗಿದೆ.